

ವಿಧವಾ ವಿವಾಹಕ್ಕೆ ಅಕದಾಸರಿಗೆ ಸಹಕರಿಸಿದ ಗಣ್ಯರು.

1934ರ ಒಂದು ವರದಿಯ ಪ್ರಕಾರ 5ರಿಂದ 10 ವರ್ಷ ವಯಸ್ಸಿನ 14,51,515 ವಿಧವೆಯರು ನಮ್ಮ ದೇಶದಲ್ಲಿದ್ದರು.

ಆ ಕಾಲದಲ್ಲಿ ವಿಧವೆಯ ಸ್ಥಿತಿ ತುಂಬಾ ಹೀನಾಯವಾಗಿತ್ತು. ಅವಳನ್ನೊಂದು ಸಾಮಾಜಿಕ ಅನಿಷ್ಟವೆಂದು ತಿಳಿಯಲಾಗುತ್ತಿತ್ತು. ಹೆತ್ತ ಅಪ್ಪ ಅಮ್ಮಂದಿರೂ ಅವರನ್ನು ಕ್ರೌರ್ಯದಿಂದ ನಡೆಸಿಕೊಳ್ಳುತ್ತಿದ್ದರು. ವಿಧವೆಯರಿಗೆ ಕೇಶಮುಂಡನ ಕಡ್ಡಾಯವಾಗಿತ್ತು. ಕುಂಕುಮ, ಮೊದಲಾದ ಮಂಗಲದ್ರವ್ಯ ನಿಷೇಧವಾಗಿತ್ತು. ಕೆಂಪು ಸೀರೆ ಉಟ್ಟು ತಲೆಯ ಮೇಲೆ ಸೆರಗು ಹಾಕಿಕೊಂಡು, ಜನರ ಕಣ್ಣಿಗೆ ಬೀಳದಂತೆ ಕತ್ತಲ ಕೋಣೆಯಲ್ಲಿ ದಿನ ಕಳೆಯಬೇಕಾಗಿತ್ತು. ಬಾಳ ಮುಂಜಾವಿನಲ್ಲಿ ಇನ್ನೂ ಬದುಕಿನ ಬಣ್ಣ ಬಣ್ಣದ ಕನಸುಗಳನ್ನು ಕಾಣುವ ಎಳೆ ವಯಸ್ಸಿನಲ್ಲಿಯೇ ವಿಧವೆಯ ಪಟ್ಟ ಹೊತ್ತು, ವಯೋ ಸಹಜ ಆಸೆ ಆಕಾಂಕ್ಷೆಗಳನ್ನು ಅದುಮಿಕೊಂಡು ಬದುಕಬೇಕಾದ ಪರಿಸ್ಥಿತಿ ಇತ್ತು.

ಸಮಾಜ ಮತ್ತು ಗುರುಮಠಗಳು ಸಮಾಜದ ಅವಿಭಾಜ್ಯ ಅಂಗವಾದ ಸ್ತ್ರೀ ಸಮೂಹದ ವಿಧವೆಯರನ್ನು ಅನುಕಂಪದಿಂದ ಕಾಣುವ ಬದಲು ಅತ್ಯಂತ ಕೀಳಾಗಿ ನಡೆಸಿಕೊಂಡವು. ಪ್ರಾಪ್ತ ವಯಸ್ಕ ಬಾಲ ವಿಧವೆಯರು ನಿಸರ್ಗ ಸಹಜವಾದ ದೈಹಿಕ ಬಯಕೆಯಿಂದಲೋ ಅಥವಾ ಬಲಾತ್ಕಾರದಿಂದಲೋ ಬಸಿರಾದರೆ ಆಕೆಯನ್ನು ಶ್ರೀ ಮಠದ ಸೀಮೆಯ ಪದಾಧಿಕಾರಿಗಳು ವಿಚಾರಣೆ ನಡೆಸಿ ಗುರುಪೀಠದಿಂದ ಬಹಿಷ್ಕಾರ ವಿಧಿಸುತ್ತಿದ್ದರು. ಜ್ಞಾತಿಗಳು ಘಟ ಶ್ರಾದ್ಧಮಾಡಿ ಅವರ ಸಂಬಂಧ ಕಡಿದುಕೊಳ್ಳುತ್ತಿದ್ದರು. ವಿಧವೆ, ಆಕೆಯ ಮಗು, ನಂತರದ ಪೀಳಿಗೆಯೆಲ್ಲ ಜಾತಿಭ್ರಷ್ಟರಾಗಿ ಬದುಕಬೇಕಾಗಿತ್ತು. ಹೀಗೆ ಗುರು–ಮಠದಿಂದ ಬಹಿಷ್ಕೃತರಾದ ಸಮೂಹ ವಿಭಿನ್ನ ಜಾತಿಯಾಗಿ ಪರಿಗಣಿತವಾಯಿತು. ಮಾಲೇರು ಅಥವಾ ಗೌಡೇರು ಎಂಬ ಹೊಸ ಜಾತಿ ಸೃಷ್ಟಿಯಾಯಿತು. ಈ ಜನಾಂಗ ಕೇವಲ ಬ್ರಾಹ್ಮಣರಿಗೆ ಮಾತ್ರ ಬಹಿಷ್ಕೃತವಾಗಿರಲಿಲ್ಲ. ಮಾಲೇರ ಮನೆಗೆ ಕ್ಷೌರಿಕರೂ ವಾಲಗದವರೂ ಬರುತ್ತಿರಲಿಲ್ಲ. ಇವರು ಮುಟ್ಟಿದ ಸುಣ್ಣವನ್ನು ನೀರನ್ನು ಒಕ್ಕಲಿಗರೂ ಮುಟ್ಟುತ್ತಿರಲಿಲ್ಲ.

ಸಿರ್ಸಿಯ ಸಾಮಾಜಿಕ ಗಣ್ಯ ಅಕದಾಸ ಗಣಪತಿ ಭಟ್ಟರು ಹವ್ಯಕ ಸಮಾಜದಲ್ಲಿ ಬೇರೂರಿದ್ದ ಬಾಲ್ಯ ವಿವಾಹ ಹಾಗೂ ಬಾಲ ವಿಧವೆಯರ ಸಮಸ್ಯೆಯನ್ನು ಪರಿಹರಿಸಲು ಶ್ರಮಿಸಿದರು. ಮೂಢ ನಂಬಿಕೆ, ಕಂದಾಚಾರದಿಂದ ಜಿಡ್ಡುಗಟ್ಟಿದ ಧರ್ಮದಲ್ಲಿ ವಿಧವಾ ವಿವಾಹವನ್ನು ಪ್ರತಿಪಾದಿಸಿದರು. ಕೇವಲ ಉಪದೇಶಕರಾಗದೆ ತಾವೇ ದಿಟ್ಟತನದಿಂದ ನಂದಿತಳೆಯ ಮಹಾಂಕಾಳಮ್ಮ ಎಂಬ ವಿಧವೆಯನ್ನು ಮದುವೆಯಾಗಿ ಹವ್ಯಕ ಸಮಾಜದಲ್ಲಿ ವಿಧವಾ ವಿವಾಹಕ್ಕೆ ನಾಂದಿ ಹಾಡಿದರು.



ಪ್ರಪ್ರಥಮವಾಗಿ ವಿಧವಾ ವಿವಾಹದ ಪೌರೋಹಿತ್ಯ ಮಾಡಿದ ಕರಸುಳ್ಳಿ ಗಣಪತಿ ಭಟ್ಟರು.

ಅಕದಾಸ ದಂಪತಿಗಳು ತಮ್ಮ ಜೀವಿತವನ್ನು ಸಮಾಜ ಪರಿವರ್ತನೆಯ ಹರಿಕಾರರಾಗಿ ವಿಧವಾ ವಿವಾಹದ ಪ್ರಚಾರಕ್ಕೆ ಸಮರ್ಪಿಸಿಕೊಂಡರು. ಭವಿಷ್ಯದ ಕಾರ್ಗತ್ತಲೆಯಲ್ಲಿ ಮುದುಡಿಹೋಗಬಹುದಾದ ಹಲವು ನತದೃಷ್ಟರಿಗೆ ಬೆಳಕು ತೋರಿದರು.

ಹವ್ಯಕ ಬ್ರಾಹ್ಮಣರಲ್ಲಿ ಅಕದಾಸ ದಂಪತಿಗಳು ಪ್ರಾರಂಭಿಸಿದ ವಿಧವಾ ವಿವಾಹ ಆಂದೋಲನ 1925ರಿಂದ 1945ರವರೆಗಿನ ಇಪ್ಪತ್ತು ವರ್ಷಗಳಲ್ಲಿ ಬಿರುಸಾಗಿ ನಡೆಯಿತು.

ಇಂದು ಕಾಲ ಬದಲಾಗಿದೆ. ಸರ್ಕಾರದ ಕಾನೂನು ಕಟ್ಟಳೆಯಿಂದಾಗಿ ಬಾಲ್ಯ ವಿವಾಹ ನಿಂತಿದೆ. ಸಮಾಜದಲ್ಲಿ ವಿಧವೆಯರನ್ನು ಮದುವೆಯಾಗಿ ಸಂಸಾರ ನಡೆಸುತ್ತಿರುವ ಹಲವರಿದ್ದಾರೆ. ಗುರು ಮಠಗಳು ಹಾಗೂ ಪುರೋಹಿತವರ್ಗ ತಮ್ಮಲ್ಲಿಯೇ ಗೊಣಗಿಕೊಂಡರೂ ಬಹಿಷ್ಕಾರದಂತಹ ಕ್ರಮ ಕೈಗೊಳ್ಳಲು ಹಿಂದೇಟು ಹಾಕುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಅತ್ಯಂತ ಪ್ರಗತಿಪರರಾಗಿ ಕಾಣಿಸಿಕೊಂಡಿರುವ ಹವ್ಯಕ ಗುರುಪೀಠದ ಇಬ್ಬರು ಮಠಾಧೀಶರು ಹವ್ಯಕ ಸ್ತ್ರೀ ಸಮೂಹಕ್ಕೆ ಆದ ಅನ್ಯಾಯದ ಪರಿಮಾರ್ಜನೆಗೆ ಪೂರ್ವಾನ್ವಯವಾಗಿ ಜಾತಿ ಬಹಿಷ್ಕಾರ ತೆರವುಗೊಳಿಸಿ ಮಾಲೇರನ್ನು ಹವ್ಯಕ ಸಮಾಜದಲ್ಲಿ ಸೇರ್ಪಡೆಗೊಳಿಸುವಂತಹ ಕ್ರಾಂತಿಕಾರಕ ನಿರ್ಧಾರ ಕೈಗೊಳ್ಳುತ್ತಾರೆಯೇ ಎಂಬುದನ್ನು ಕಾದು ನೋಡಬೇಕಾಗಿದೆ.

ಅಕದಾಸ ದಂಪತಿಗಳ ಸಮಾಜ ಸುಧಾರಣೆಯ ಸಾಹಸಗಾಥೆ ಚರಿತ್ರೆಯಲ್ಲಿ ಅಪೂರ್ವ ಅಧ್ಯಾಯವಾಗಿ ಉಳಿಯುತ್ತದೆ. ■